(Cross examination deferred).

(Computerized to my dictation in the open court as deposed by the witness.)

**R. O. I. & A. C.,**

**(PRASHANTHI.G)**
**IX Addl. C.C. & S.J., Bengaluru.**

ದಿನಾಂಕಃ **25.06.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟಿ ಸವಾಲು ಃ ವಾದಿ ಪರ ಶ್ರೀ. ಪಿ.ಆರ್ ವಕೀಲರಿಂದಃ -

1. ನನಗೆ ಇಂಗ್ಲೀಷ್ ಓದಲು, ಬರೆಯಲು ಮತ್ತು ಅರ್ಥ ಮಾಡಿಕೊಳ್ಳಲು ಬರುತ್ತದೆ. ದಿನಾಂಕ 09.09.2015 ರಂದು ದಾವಾ ಆಸ್ತಿಯನ್ನು ನಾನು 1 ಹಾಗೂ 2 ನೇ ಪ್ರತಿವಾದಿಗಳಿಂದ ಖರೀದಿಸಿದ್ದೇನೆ ಎಂದರೆ ಸರಿ. ನಿ.ಡಿ.1 ರಲ್ಲಿ ನಾನು ನಂ.8/1, 3 ನೇ ಮಹಡಿ, 1 ನೇ ಅಡ್ಡ ರಸ್ತೆ, 4 ನೇ ಮುಖ್ಯ ರಸ್ತೆ, ಸಂಪಂಗಿರಾಮನಗರದಲ್ಲಿ ವಾಸ ಮಾಡುತ್ತಿದ್ದೆ ಎಂದು ವಿಳಾಸ ತೋರಿಸಿದ್ದೆ ಎಂದರೆ ಸರಿ. 1 ಹಾಗೂ 2 ನೇ ಪ್ರತಿವಾದಿಗಳು ನಂ.28, 4 ನೇ ಅಡ್ಡ ರಸ್ತೆಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ಮನೆಗೂ ಹಾಗೂ ಪ್ರತಿವಾದಿಗಳ ಮನೆಗೂ 3 ಕಟ್ಟಡಗಳ ಅಂತರ ಇದೆ. ನಾನು ಮತ್ತು ಪ್ರತಿವಾದಿಗಳು ಸಂಬಂಧಿಕರು.

2. 1 ಮತ್ತು 2 ನೇ ಪ್ರತಿವಾದಿಗಳು ವೇದಾಚಲಂ ಅವರಿಗೆ ಕ್ರಯದ ಕರಾರು ಪತ್ರ ಮಾಡಿಕೊಟ್ಟಿದ್ದು ಸದರಿ ದಾಖಲೆಯಲ್ಲಿ ನಾನು ಪಕ್ಷಕಾರಳಲ್ಲ, ನನ್ನ ಸಹಿ ಇಲ್ಲ ಮತ್ತು ನಾನು ಸಾಕ್ಷಿದಾರಳಲ್ಲ ಎಂದರೆ ಸಾಕ್ಷಿ ಸದರಿ ದಾಖಲೆಯನ್ನು ಸೃಷ್ಟಿಸಲಾಗಿದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯ ಮಾತುಕತೆ ಆಗುವ ಸಂದರ್ಭದಲ್ಲಿ ನಾನು ಇದ್ದಿರಲಿಲ್ಲ ಮತ್ತು ಏನೆಲ್ಲಾ ಮಾತುಕತೆಯಾಗಿದೆ ಎಂಬುದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಆ ರೀತಿಯ ಮಾತುಕತೆ ಆಗಿಲ್ಲ ಎಂದು ನುಡಿಯುತ್ತಾರೆ. ಈ ದಾಖಲೆ ಆಗುವ ಸಂದರ್ಭದಲ್ಲಿ ವಾದಿ 2 ಲಕ್ಷ ರೂಪಾಯಿಯನ್ನು ಮುಂಗಡ ಹಣವಾಗಿ ನೀಡಿದ್ದಾರೆ ಎಂಬುದು ಗೊತ್ತಿದೆಯಾ ಎಂದರೆ ಸಾಕ್ಷಿ ಅದು ಸುಳ್ಳು ಎಂದು ನುಡಿಯುತ್ತಾರೆ. ನಿ.ಪಿ.2 ರ ಬಗ್ಗೆ ನನಗೆ ವೈಯುಕ್ತಿಕ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಅದನ್ನು ಸೃಷ್ಟಿ ಮಾಡಲಾಗಿದೆ ಎಂದು ನುಡಿಯುತ್ತಾರೆ.

3. 1 ಹಾಗೂ 2 ನೇ ಪ್ರತಿವಾದಿಗಳು ನನಗೆ ಹೇಳಿಕೊಟ್ಟ ರೀತಿಯಲ್ಲಿ ನಾನು ನನ್ನ ಮುಖ್ಯ ವಿಚಾರಣೆಯನ್ನು ಹಾಕಿದ್ದೇನೆ ಎಂದರೆ ಸಾಕ್ಷಿ ಅವರು ನನಗೆ ಏನನ್ನೂ ಹೇಳಿಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ 1 ಹಾಗೂ 2 ನೇ ಪ್ರತಿವಾದಿಗಳು ಮಾತ್ರ ಲಿಖಿತ ತಕರಾರನ್ನು ಹಾಕಿದ್ದಾರೆ ಎಂದರೆ ಸರಿ. ಈ ದಾವೆಯಲ್ಲಿ 1 ನೇ ಪ್ರತಿವಾದಿ ತೀರಿಹೋಗಿದ್ದಾರೆ ಎಂದರೆ ಸರಿ. 2 ನೇ ಪ್ರತಿವಾದಿ ತ್ಯಾಗರಾಜು ಪ್ರತಿ ವಾಯಿದೆಯಂದು ನನ್ನ ಜೊತೆ ನ್ಯಾಯಾಲಯಕ್ಕೆ ಬರುತ್ತಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು 1 ಹಾಗೂ 2 ನೇ ಪ್ರತಿವಾದಿಗಳ ಪರವಾಗಿ ನಾನೇ ಸಾಕ್ಷಿ ನೀಡುತ್ತಿದ್ದೇನೆ ಎಂದು ಬರೆದಿದೆ

ಎಂದರೆ ಸರಿ. 2 ನೇ ಪ್ರತಿವಾದಿ ಈ ನ್ಯಾಯಾಲಯದಲ್ಲಿ ಬಂದು ಸಾಕ್ಷಿ ಹೇಳುವುದಿಲ್ಲ ಎಂದರೆ ಸಾಕ್ಷಿ ನಾನೇ ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನೀಡಬಹುದು ಎಂದರೆ ಸಾಕ್ಷಿ ನಾನೇ ದಾವೆಯನ್ನು ನಡೆಸುತ್ತಿದ್ದೇನೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಬರುತ್ತಾರೆಯೇ ಎಂದರೆ ಸಾಕ್ಷಿ ದಾವೆಯನ್ನು ನಾನೇ ನೋಡಿಕೊಳ್ಳುತ್ತೇನೆ ಎಂದು ನುಡಿಯುತ್ತಾರೆ.

4. ದಾವಾ ಆಸ್ತಿಯನ್ನು ಖರೀದಿಸುವ ಮೊದಲು ದಾವಾ ಆಸ್ತಿಯ ಮೇಲೆ ಯಾವುದಾದರೂ ಕ್ರಯದ ಕರಾರು ಪತ್ರ ಅಥವಾ ಋಣಗಳು ಇವೆಯಾ ಎಂಬ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಆ ರೀತಿಯಾಗಿ ಏನೂ ಇದ್ದಿರಲಿಲ್ಲ ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು 1 ಹಾಗೂ 2 ನೇ ಪ್ರತಿವಾದಿಗಳ ಜೊತೆ ವಿಚಾರಿಸಿದ್ದೇನೆ. ದಾವಾ ಆಸ್ತಿಯ ದಾಖಲೆಗಳ ಬಗ್ಗೆ ಯಾರದ್ದಾದರೂ ಹಿತಾಸಕ್ತಿ ಇದೆಯಾ ಎಂದು ನಾನು ವಕೀಲರನ್ನು ಕೇಳಿದ್ದೇನಾ ಎಂದರೆ ಸಾಕ್ಷಿ ಕೇಳಿದ್ದೇನೆ ಎಂದು ನುಡಿಯುತ್ತಾರೆ. ನಾನು ಸಿ.ಪ್ರಕಾಶ್ (ಸಾಕ್ಷಿಯ ವಕೀಲರು) ವಕೀಲರ ಜೊತೆ ಈ ಬಗ್ಗೆ ಕೇಳಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಖರೀದಿಸುವ ಮೊದಲು ಪತ್ರಿಕಾ ಪ್ರಕಟಣೆ ನೀಡಿಲ್ಲ.

5. ನಾನು 2001 ರಲ್ಲಿ ಮದುವೆಯಾಗಿದ್ದೇನೆ. 2001 ರಿಂದ 2015 ರವರೆಗೂ ನಾನು ಅದೇ ಮನೆಯಲ್ಲಿ ವಾಸವಾಗಿದ್ದೆ ಎಂದರೆ ಸರಿ. ಚೆನ್ನಮ್ಮ ಅವರು ಇರುವ ಮನೆ ಮತ್ತು ಕರಾರು ಪತ್ರ ಮಾಡಿಕೊಂಡ ಜಾಗ ಎರಡೂ ಒಂದೇ ಎಂದರೆ ಸರಿ. 1993 ರಲ್ಲಿ ಸದರಿ ಕಟ್ಟಡ ವಾಣಿಜ್ಯ

ಕಟ್ಟಡವಾಗಿತ್ತು ಎಂದರೆ ಸರಿ. ಸದರಿ ವಾಣಿಜ್ಯ ಕಟ್ಟಡದಲ್ಲಿ ಒಂದು ವಕೀಲರ ಕಚೇರಿ, ಒಂದು ರೇಡಿಯೋ ಅಂಗಡಿ ಮತ್ತು ಒಂದು ಬೇಕರಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ದಾವಾ ಆಸ್ತಿಯನ್ನು ಖರೀದಿಸುವ ಸಂದರ್ಭದಲ್ಲಿ ಸದರಿ ಕಟ್ಟಡದಲ್ಲಿ ಒಂದು ವಕೀಲರ ಕಚೇರಿ ಮಾತ್ರ ಇತ್ತು. 2015 ರಲ್ಲಿ ಕ್ರಯ ಪತ್ರ ಮಾಡಿಕೊಳ್ಳುವ ಸಂದರ್ಭದಲ್ಲಿ ಚಿನ್ನಮ್ಮ ಅವರು ಸದರಿ ಆಸ್ತಿಯಲ್ಲೇ ವಾಸಿಸುತ್ತಿದ್ದರು.

6. ವಾದಿ 1 ಹಾಗೂ 2 ನೇ ಪ್ರತಿವಾದಿಗಳಿಗೆ ದಾವಾ ಆಸ್ತಿಯ ವಿಳಾಸಕ್ಕೆ ಕ್ರಯದ ಕರಾರು ಪತ್ರದ ಆಧಾರದಲ್ಲಿ ಕ್ರಯ ಪತ್ರ ಮಾಡಿಕೊಳ್ಳಿ ಎಂದು ನೋಟೀಸು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ಹಾಗೂ 2 ನೇ ಪ್ರತಿವಾದಿಗಳ ಜೊತೆ ವಾದಿ ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿದ್ದರು ಮತ್ತು ಅದು ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ವಾದಿ ಮತ್ತು 1 ಹಾಗೂ 2 ನೇ ಪ್ರತಿವಾದಿಗಳ ಜೊತೆ ಕ್ರಯದ ಕರಾರು ಪತ್ರ ಇರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಸದರಿ ಆಸ್ತಿಯಲ್ಲಿ ಇದ್ದಿರಲಿಲ್ಲ ಮತ್ತು ಆ ಕಾರಣದಿಂದ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹೇಳಿಕೊಟ್ಟ ರೀತಿಯಲ್ಲಿ ನಾನು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರು ನನಗೆ ಏನೂ ಹೇಳಿಕೊಟ್ಟಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಕ್ರಯ ಪತ್ರ ಮಾಡಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ ಇದೆ,**

**(ಪ್ರಶಾಂತಿ.ಜಿ)**
**9 ನೇ ಅಪರ ನಗರ ಸಿವಿಲ್ ಮತ್ತು**
**ಸತ್ರ ನ್ಯಾಯಾಧೀಶರು, ಬೆಂಗಳೂರು.**